# ಜನ ಸುರಕ್ಷೆಯ 3 ಯೋಜನೆಗಳಿಗೆ ಚಾಲನೆ

■ ವಿಕ ಸುದ್ದಿಲೋಕ ಧಾರವಾಡ

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಜನ-ಧನದ ನಂತರ ಜನರ ಸುರಕ್ಷತೆಗಾಗಿ ಮತ್ತೆ ಮೂರು ಹೊಸ ಯೋಜನೆ ಗಳನ್ನು ಜಾರಿಗೆ ತಂದಿದ್ದು, ಪ್ರತಿಯೊಬ್ಬರೂ ಅವುಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆ ಸಚಿವ ಜಿ.ಎಂ.ಸಿದ್ದೇಶ್ವರ ಹೇಳಿದರು.

ಜಿಲ್ಲಾ ಪಂಚಾಯತಿ ಸಭಾಭವನದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಜನ ಸುರಕ್ಷತೆಯ ಮೂರು ಹೊಸ ಯೋಜನೆಗಳಿಗೆ ಶನಿವಾರ ಚಾಲನೆ ನೀಡಿ ಮಾತನಾಡಿದ ಅವರು, ಪ್ರಧಾನಮಂತ್ರಿ ಸುರಕ್ಷಾ ವಿಮಾ ಯೋಜನೆ ವಾರ್ಷಿಕ 12 ರೂ. ಪ್ರೀಮಿಯಂ ಭರಿಸುವ ಮೂಲಕ ದುರ್ಘಟನೆ ಸಂಭವಿಸಿದಲ್ಲಿ 2 ಲಕ್ಷ ರೂ. ವಿಮೆ ಲಭಿಸುತ್ತದೆ. 18-40 ವಯಸ್ಸಿನ ಉಳಿತಾಯ ಖಾತೆದಾರರು ತಿಂಗಳಿಗೆ 42ರಿಂದ 210 ರೂ. ವಿನಿಯೋಗಿಸುವ ಮೂಲಕ ಅಟಲ್ ಪೆನ್ಶನ್ ಯೋಜನೆಯ ಲಾಭ ಪಡೆಯ ಬಹುದು. ಈ ಮೂಲಕ 60 ವರ್ಷದ ನಂತರ 1ರಿಂದ 5 ಸಾವಿರ ರೂ. ವರೆಗೆ ಪಿಂಚಣಿ ದೊರೆಯುತ್ತದೆ ಎಂದರು.

ಅದೇ ರೀತಿ ಪ್ರಧಾನಮಂತ್ರಿ ಜೀವನ ಜ್ಯೋತಿ ವಿಮಾ ಯೋಜನೆಯಡಿ 330 ರೂ. ಪ್ರೀಮಿಯಂ ಭರಿಸಿದರೆ 2 ಲಕ್ಷ ರೂ. ಜೀವ ವಿಮೆ ಪಡೆಯಬಹುದು ಎಂದರು.

ಪ್ರಧಾನಿಯವರ ಅಭಿವೃದ್ಧಿಪರ ಯೋಜನೆಗಳ ಕುರಿತು ಗ್ರಾಮೀಣ ಭಾಗದಲ್ಲಿ ಹೆಚ್ಚು ಪ್ರಚಾರ ಆಗಬೇಕು. ಯಾವುದೇ ಸಬೂಬು ಹೇಳದೆ ಗ್ರಾಮೀಣ ಜನರಿಗೆ ತಿಳಿವಳಿಕೆ ನೀಡಬೇಕು. ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಹಾಗೂ ಬ್ಯಾಂಕ್‌ಗಳು ಜನಸಾಮಾನ್ಯರ ಜೀವನಮಟ್ಟ ಸುಧಾರಿಸಲು ಮುಂದಾಗಬೇಕು ಎಂದು ಕಿವಿಮಾತು ಹೇಳಿದರು.

ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್, ಶಾಸಕ ಅರವಿಂದ ಬೆಲ್ಲದ, ಜಿಲ್ಲಾಧಿಕಾರಿ ಪಿ. ರಾಜೇಂದ್ರ ಚೋಳನ್, ಜಿಪಂ ಸಿಇಒ ರಮಣದೀಪ ಚೌಧರಿ, ಮೇಯರ್ ಅಶ್ವಿನಿ ಮಜ್ಜಗಿ, ಉಪಮಹಾಪೌರ ಸ್ಮಿತಾ ಜಾಧವ, ಜಿಪಂ ಅಧ್ಯಕ್ಷ ಟಿ.ಜಿ.ಬಾಲಣ್ಣವರ, ಉಪಾಧ್ಯಕ್ಷೆ ಶಾಂತಾದೇವಿ ನಿಡುವನಿ ಮತ್ತಿತರು ಹಾಜರಿದ್ದರು.




**ಧಾರವಾಡ ಜಿಪಂ ಸಭಾಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಜನ ಸುರಕ್ಷತೆಯ ಮೂರು ಯೋಜನೆಗಳಿಗೆ ಕೇಂದ್ರ ಸಚಿವ ಜಿ.ಎಂ.ಸಿದ್ದೇಶ್ವರ ಶನಿವಾರ ಚಾಲನೆ ನೀಡಿದರು. ಜಗದೀಶ ಶೆಟ್ಟರ, ಅರವಿಂದ ಬೆಲ್ಲದ ಮತ್ತಿತರರು ಉಪಸ್ಥಿತರಿದ್ದರು.**

## ನಷ್ಟದಲ್ಲಿರುವ ಕೈಗಾರಿಕೆಗಳ ಪುನಶ್ಚೇತನಕ್ಕೆ ಕ್ರಮ: ಸಿದ್ದೇಶ್ವರ

**ಧಾರವಾಡ:** ಆರ್ಥಿಕ ಮುಗ್ಗಟ್ಟಿನಿಂದ ನಷ್ಟ ಅನುಭವಿಸುತ್ತಿರುವ ಕೈಗಾರಿಕೆಗಳ ಪುನಶ್ಚೇತನಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಒಂದು ವೇಳೆ ಆದಾಗದಿದ್ದರೆ ಅಂಥವುಗಳನ್ನು ಮುಚ್ಚಲಾಗುವುದು ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆ ರಾಜ್ಯ ಸಚಿವ ಜಿ.ಎಂ.ಸಿದ್ದೇಶ್ವರ ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ರಾಜ್ಯದಲ್ಲಿ ಐದು ಕಾರ್ಖಾನೆಗಳು ನಷ್ಟದಲ್ಲಿವೆ. ಅವುಗಳ ಪುನಶ್ಚೇತನಕ್ಕೆ ಸಾರ್ವಜನಿಕ ವಲಯ ಮುಂದೆ ಬಂದರೆ ಸರಕಾರ ಪ್ರೋತ್ಸಾಹ ನೀಡುವುದು. ಒಂದು ವೇಳೆ ಪುನಶ್ಚೇತನ ಮಾಡಲಾಗದಿದ್ದರೆ ಅಂತಹ ಕಾರ್ಖಾನೆಗಳನ್ನು ಮುಚ್ಚಲು ಕ್ರಮ ಕೈಗೊಳ್ಳಲಾಗುವುದು ಎಂದರು.

**ಭೂಸ್ವಾಧೀನ ಕಾಯಿದೆ ರೈತ ಪರ:** ಕೇಂದ್ರ ಸರಕಾರ ಜಾರಿಗೆ ತಂದಿರುವ ಭೂಸ್ವಾಧೀನ ಕಾಯಿದೆ ರೈತಪರವಾಗಿದ್ದು ಅದನ್ನು ರೈತ ವಿರೋಧಿ ಎಂದು ಪ್ರತಿಪಕ್ಷಗಳು ಆರೋಪ ಮಾಡುತ್ತಿರುವುದು ನಿರಾಧಾರವಾಗಿದ್ದು ಜನತೆ ಹಾಗೂ ರೈತರು ಇದನ್ನು ನಂಬಬಾರದು ಎಂದು ಮನವಿ ಮಾಡಿದರು.